

ಸಿನಿಮಾದೊಟ್ಟಿಗೆ ಧಾರಾವಾಹಿಗಳಲ್ಲಿ ನಟಿಸುವ ಅವಕಾಶಗಳು ಬರುತ್ತಿವೆ. ಯಾವುದಕ್ಕೂ ಅಡ್ಡಗೆರೆ ಹಾಕಿಕೊಳ್ಳುವುದಿಲ್ಲ ಎನ್ನುವ ಅವರು, ಸದ್ಯ ಸಿನಿಮಾದಲ್ಲಿರುವುದರಿಂದ ಇದರೆಡೆಗೆ ಗಮನ ನೀಡುತ್ತೇನೆ. ನನ್ನ ಅಮ್ಮನಿಗೆ ನಾನು ಧಾರಾವಾಹಿಗಳಲ್ಲಿ ನಟಿಸಬೇಕೆಂಬ ಆಸೆ. ಧಾರಾವಾಹಿಗಳು ಜನರಿಗೆ ಬೇಗ ರೀಚ್ ಆಗುತ್ತವೆ ಹಾಗೂ ಜನರು ಗುರುತಿಸುತ್ತಾರೆ, ಧಾರಾವಾಹಿಗಳಲ್ಲಿ ಅವಕಾಶಗಳೂ ಹೆಚ್ಚಿರುತ್ತವೆ ಎನ್ನುವುದು ಅವರ ಅಭಿಪ್ರಾಯ. ಆದರೆ ಸೀರಿಯಲ್–ಸಿನಿಮಾ ನಡುವೆ ಗೆರೆ ಎಳೆಯುವುದಕ್ಕಿಂತ, ಯಾವುದೇ ಪ್ಲಾಟ್‌ಫಾರ್ಮ್‌ನಲ್ಲಾದರೂ ಸರಿ, ನಟಿಸಬೇಕು ಎಂಬುದಷ್ಟೇ ನನ್ನ ಆದ್ಯತೆ' ಎಂದು ದೃಢವಾಗಿ ಹೇಳುತ್ತಾರೆ.

ಧಾರಾವಾಹಿಯಲ್ಲಿ ನಟಿಸಿದ್ದರಿಂದ ನಟನೆ ಸವಾಲೆನಿಸಿಲ್ಲ ಎನ್ನುವ ಅವರು, ಪಾತ್ರಕ್ಕೆ ತಕ್ಕಂತೆ ತಮ್ಮನ್ನು ತಾವು ಎಲ್ಲಾ ಆಯಾಮಗಳಲ್ಲೂ ಸಜ್ಜುಗೊಳಿಸಿಕೊಳ್ಳುತ್ತಾರಂತೆ. 'ಚಿತ್ರೀಕರಣ ಇಲ್ಲದ ಸಮಯದಲ್ಲಿ ನಾನೇ ಸ್ವಯಂ ಅಭ್ಯಾಸ ಮಾಡಿಕೊಳ್ಳುತ್ತೇನೆ. ಧಾರಾವಾಹಿಯಲ್ಲಿ ಕ್ಯಾಮೆರಾ ಎದುರಿಸಿದ್ದರಿಂದ ಭಯ, ಆತಂಕ ಇಲ್ಲ. ಆದರೆ ಸೀರಿಯಲ್–ಸಿನಿಮಾ ನಡುವಿನ ವ್ಯತ್ಯಾಸ ಕಂಡುಕೊಳ್ಳುತ್ತಿದ್ದೇನೆ. ಒಂದು ಪಾತ್ರ ಕೊಟ್ಟಾಗ 'ಕ್ಯಾರೆಕ್ಟರ್ ಅನಲೈಸೇಷನ್' ಮಾಡುತ್ತೇನೆ. ಆ ಪಾತ್ರದ ಆಳ ಅಗಲ ನೋಡಿಕೊಂಡು ಅದರ ಬಗ್ಗೆ ತಿಳಿದುಕೊಳ್ಳುತ್ತೇನೆ. ಒಬ್ಬ ಉತ್ತಮ ನಟಿಗಿರಬೇಕಾದ 'ಮ್ಯಾನರಿಸಂ' ಗಮನಿಸುತ್ತೇನೆ. ನನ್ನ ಪಾತ್ರ ತಯಾರಿಯೊಂದಿಗೆ ನಿರ್ದೇಶಕರ ನಿರೀಕ್ಷೆಯನ್ನೂ ಒಟ್ಟುಗೂಡಿಸುತ್ತೇನೆ' ಎಂದು ಹೇಳುತ್ತಾರೆ.

'ದಿಲ್ ಖುಷ್' ಜೊತೆಗೆ, ನಟ ವಿಜಯ್ ರಾಘವೇಂದ್ರ ಅಭಿನಯದ ಥ್ರಿಲ್ಲರ್ ಕಥೆ 'ಮರೀಚಿ' ಸಿನಿಮಾದಲ್ಲಿ ವೈದ್ಯೆಯ ಪಾತ್ರದಲ್ಲಿ ಸ್ಪಂದನಾ ಕಾಣಿಸಿಕೊಳ್ಳುತ್ತಿದ್ದಾರೆ. ಎರಡೂ ಸಿನಿಮಾಗಳ ಶೂಟಿಂಗ್ ಮುಗಿದಿದೆ.

ನನಗೆ ಇಂಥದ್ದೇ ಪಾತ್ರ ಬೇಕೆಂಬ ನಿರೀಕ್ಷೆಗಳಿಲ್ಲ ಎನ್ನುವ ಸ್ಪಂದನಾ, 'ಕೊರೊನಾ ನಂತರ ಎಲ್ಲವೂ ಬದಲಾಗಿದೆ. ಎಷ್ಟೋ ಸಿನಿಮಾಗಳು ಸಿದ್ಧಗೊಂಡು ಬಿಡುಗಡೆ ಆಗುವುದಕ್ಕೇ ಕಷ್ಟಪಡುವಂಥ ಪರಿಸ್ಥಿತಿ. ಹೀಗಿದ್ದಾಗ ನನ್ನನ್ನು ನಾನು ಗುರುತಿಸಿಕೊಳ್ಳುವಂತೆ ಮಾಡುವಂಥ ಅವಕಾಶವಷ್ಟೇ ನನ್ನ ಆದ್ಯತೆ. ಕಲಿಯಲು ಅವಕಾಶ ಇರುವಂಥ ಸಿನಿಮಾ ಅದಾಗಬೇಕು' ಎನ್ನುತ್ತಾರೆ.

'ಇವತ್ತು ಇದ್ದ ಹಾಗೆಯೇ ನಾಳೆಯೂ ಇದ್ದರೆ ಏನು ಪ್ರಯೋಜನ? ನಿನ್ನೆಗಿಂತ ಇಂದು ಭಿನ್ನವಿರಬೇಕು, ಆ ಭಿನ್ನತೆಯಲ್ಲಿ ಬೆಳವಣಿಗೆ ಕಾಣಬೇಕು. ಅಂಥ ಬೆಳವಣಿಗೆಗೆ ಅವಕಾಶ ನೀಡುವಂಥ ಪಾತ್ರ ಬೇಕು' ಎನ್ನುವ ಅವರು, ಹೊಸಬರಿಗಿರುವ ಸವಾಲಿನ ಕುರಿತೂ ಮಾತನಾಡುತ್ತಾರೆ.

'ಸಿನಿಮಾ ಕ್ಷೇತ್ರಕ್ಕೆ ಹೊಸಬರಾಗಿದ್ದರೆ, ಇಲ್ಲಿನ ಒಂದು ಪ್ರೊಸೀಜರ್ ಬಗ್ಗೆ ಗೊತ್ತೇ ಆಗುವುದಿಲ್ಲ. ಅದನ್ನು ನಾವೇ ಕಂಡುಕೊಳ್ಳಬೇಕು. ಸೀರಿಯಲ್ ಮಾಡುತ್ತಿರುವ ಕೆಲವರಿಗೆ ಒಳ್ಳೆ ಅವಕಾಶಗಳು ದಿಢೀರನೆ ಸಿಗುತ್ತವೆ. ಧಾರಾವಾಹಿಯಿಂದ ಸ್ಟಾರ್ ಆದವರಿದ್ದಾರೆ. ಆದರೆ ಕೆಲವರಿಗೆ ಸೀರಿಯಲ್ ಮಾಡುವುದೇ ಮೈನಸ್ ಆಗಿಬಿಡುತ್ತದೆ. ಇಲ್ಲಿ ನಮ್ಮನ್ನು ನಾವು ಕಂಡುಕೊಳ್ಳುವುದೇ ದೊಡ್ಡ ಸವಾಲು' ಎನ್ನುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in

# ಈ 'ರಾಜ್ಯಪಾಲ' ಪ್ರೇಮಿಯೂ ಹೌದು!

ನಟ ರಾಘವೇಂದ್ರ ರಾಜ್‌ಕುಮಾರ್ ಅವರು ಎರಡು ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಶೀಘ್ರವೇ ಅವು ಬಿಡುಗಡೆಯಾಗುವ ಸೂಚನೆ ದೊರೆತಿದೆ. ರಾಘವೇಂದ್ರ ರಾಜ್‌ಕುಮಾರ್, ನಟಿ ಶ್ರುತಿ ಅಭಿನಯದ '13' ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ತೆರೆಗೆ ಬರಲು ಸಿದ್ಧತೆ ನಡೆಯುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ನೈಜ ಘಟನೆಯ ಆಧಾರದಲ್ಲಿ ನಿರ್ದೇಶಕ ನರೇಂದ್ರಬಾಬು '13' ಕಥೆ ಬರೆದಿದ್ದಾರೆ. ಅಂತರಜಾತಿ ಪ್ರೇಮಕಥೆಯಲ್ಲಿ ಟೀ ಅಂಗಡಿಯ ಸಾಯಿರಾಬಾನು ಪಾತ್ರದಲ್ಲಿ ಶ್ರುತಿ ನಟಿಸಿದ್ದರೆ, ಗುಜರಿ ಅಂಗಡಿ ಮಾಲೀಕ ಮೋಹನ ಕುಮಾರ ಪಾತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಕಾಣಿಸಿಕೊಂಡಿದ್ದಾರೆ. ಈ ದಂಪತಿಯ ಪ್ರೇಮ ಪ್ರಸಂಗವೇ ಕಥೆಯ ವಸ್ತು. ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

ರಾಘವೇಂದ್ರ ರಾಜ್‌ಕುಮಾರ್ ನಟನೆಯ ಮತ್ತೊಂದು ಚಿತ್ರ 'ಧ್ರುವ 369' ಕ್ಲೈಮಾಕ್ಸ್ ಹಂತದ ಚಿತ್ರೀಕರಣದಲ್ಲಿದೆ. ಈ ಚಿತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್ ರಾಜ್ಯಪಾಲರಾಗಿ ಕಾಣಿಸಿಕೊಳ್ಳುತ್ತಿರುವುದು ವಿಶೇಷ.

ರಾಘವೇಂದ್ರ ರಾಜ್‌ಕುಮಾರ್ ಅವರು ಕಥೆಯ ಪ್ರಾರಂಭ, ಮಧ್ಯ ಹಾಗೂ ಕೊನೆಯಲ್ಲಿ ಇರುತ್ತಾರೆ. ಪುರಾಣ ಕಾಲದ ಧ್ರುವ ನಕ್ಷತ್ರ ಕಥೆಗೂ ಈಗಿನ ಖಗೋಳಶಾಸ್ತ್ರಕ್ಕೂ ಸಂಬಂಧದ ಕಥೆ ಇದಾಗಿದ್ದು, ಕುತೂಹಲಕಾರಿ ಅಂಶಗಳನ್ನು ಹೊಂದಿದೆ ಎಂದು ನಿರ್ದೇಶಕ ಶಂಕರ್‌ನಾಗ್ ಮಾಹಿತಿ ನೀಡಿದ್ದಾರೆ.

ಮುಖ್ಯ ಪಾತ್ರದಲ್ಲಿ ರಮೇಶ್‌ಭಟ್, ಅತೀಶ್‌ಶೆಟ್ಟಿ, ಚಂದನಾ, ನಮಿತಾ, ಸಂದೀಪ್‌ಮಲಾನಿ, ಅರುಣ್‌ಸಾಗರ್, ಮೇಘಾಗೌಡ, ಭಾಸ್ಕರ್ ಮಣಿಪಾಲ ಇದ್ದಾರೆ.

